ಸ್ವಾರ್ಥ ಗೌಡನೊಳಗೆ ಇರುವುದು, ಪರರ ಮನೆಯ ಹೆಣ್ಣಾದ ಸೊಸೆ ಸತ್ತರೆ ಮತ್ತೆ ತರಬಹುದು ಎಂಬ ಕ್ರೌರ್ಯವನ್ನು, ಲಿಂಗವ್ಯವಸ್ಥೆಯನ್ನು ಯಾವ ಔದಾರ್ಯವೂ ಮುಚ್ಚಿಟ್ಟುಕೊಳ್ಳಲಾರದು. ಕೆರೆಗೆ ಹಾರದ ಕಥೆ ಆರಂಭವಾಗುವುದೇ ಸೊಸೆ ಹೆಣ್ಣನ್ನು ಹಾರಕೊಡುವ ಪ್ರಸ್ತಾಪದಿಂದ. ನಿಜಾರ್ಥದಲ್ಲಿ ಅದು ಪಿತೃರೂಪಿ ಸಂಸ್ಕೃತಿಯಲ್ಲಿನ ಹೆಣ್ಣಿನ ದುರಂತದ ಪರಿಯೇ ಆಗಿದೆ. ಗಂಡಾಳಿಕೆ ಹೆಣ್ಣಿನ ಶಕ್ತಿಯನ್ನು, ಸಾಮರ್ಥ್ಯವನ್ನು ತನ್ನ ಸ್ವಾರ್ಥಕ್ಕಾಗಿ, ಹಿರಿಮೆಗಾಗಿ ಹೇಗೆ ಬಳಸಿಕೊಂಡಿದೆ ಎನ್ನುವುದಕ್ಕೆ 'ಕೆರೆಗೆ ಹಾರ'ದ ಹೆಣ್ಣಿನ ಬಲಿ ಒಂದು ಸ್ಪಷ್ಟ ಸಾಕ್ಷಿ. ಹೆಣ್ಣಿನ ಪ್ರಜನನ ಶಕ್ತಿ ಸಮೃದ್ಧಿಯ ಸಂಕೇತ ಎಂಬ ಪರಿಗ್ರಹಿಕೆಯಲ್ಲಿ ಹೆಣ್ಣನ್ನು ಕೆರೆಗೆ ಹಾರವಾಗಿ ಕೊಟ್ಟಾಗ ಕೆರೆಯಲ್ಲಿ ಗಂಗೆ ಚಿಮ್ಮಿ ನೀರು ತುಂಬಿಕೊಳ್ಳುವ ಬಗೆಯಲ್ಲಿ ಹೆಣ್ಣಿನ ಸಾವನ್ನು ಸಂಭ್ರಮಿಸುವ, ವೈಭವೀಕರಿಸುವ ಗಂಡಾಳಿಕೆಯ ಮನಸ್ಥಿತಿಯು– ಹೆಣ್ಣನಕ್ಕಷ್ಟೇ ಅಲ್ಲ ಇಡಿಯ ಮಾನವಕುಲಕ್ಕೆ ಅತ್ಯಂತ ಅಪಾಯಕಾರಿಯಾದದ್ದು. 'ಕೆರೆಗೆ ಹಾರ' ಪಿತೃರೂಪಿ ಪಠ್ಯವನ್ನು ಮುಂದಿಟ್ಟು ದಾಖಲಿಸುವುದಾದರೆ,

ಹೊತ್ತಗೆ ತೆಗಸ್ಯಾರು ಜೋಯಿಸ್ರ ಕೇಳ್ಯಾರು
ದೇವ್ರಲ್ಲ ದಿಂಡ್ರಲ್ಲ ದೆವ್ವಲ್ಲ ಭೂತಲ್ಲ
ಹಿರಿಸೊಸಿ ಮಲ್ಲವನ ಹಾರವ ಕೊಡಬೇಕು
ಹಾರವ ಕೊಟ್ಟರ ನೀರು ಬೀಳೂವಂದ್ರು

ಹೀಗೆ ನಿರ್ದಿಷ್ಟವಾಗಿ ಸೊಸೆಹೆಣ್ಣನ್ನು ಹಾರಕೊಡಬೇಕೆಂದು ಹೇಳುವಲ್ಲಿ ಆ ಸಂಸ್ಕೃತಿಯಲ್ಲಿ ಹೆಣ್ಣು ಜೀವ ಮತ್ತು ಬದುಕಿಗಿರುವ ಅರ್ಥವನ್ನು, ಮೌಲ್ಯವನ್ನು ತೆರೆದಿಡುತ್ತದೆ.

ಸೊಸೆಹೆಣ್ಣಿಗೆ ತನ್ನನ್ನು ಹಾರಕೊಡುವ ಸಂಗತಿ ಪರೋಕ್ಷವಾಗಿ ತಿಳಿದಾಗ ಬದುಕುವ ದಾರಿಯ ಹುಡುಕಾಟ ನಡೆಸುತ್ತಾಳೆ. ತವರಿಗೆ ಹೋಗಿ ಬರಲೂ ಗಂಡಾಳಿಕೆಯ ಒಪ್ಪಿಗೆಯ ಮುದ್ರೆ ಪಡೆಯುವ ಹೆಣ್ಣಿನ ಪರತಂತ್ರ ಯಾವ ಬಗೆಯದೆಂದು ತಿಳಿಯುತ್ತದೆ. "ಸರ್ರನೆ ಹೋಗವ್ವ, ಭರ್ರನೆ ಬಾರವ್ವ" ಎಂಬ ಒಪ್ಪಿಗೆಯ ಅಂಕಿತದಲ್ಲಿ ಅನುಭೂತಿ, ಸಹಾನುಭೂತಿಯನ್ನು ಅರಸಬೇಕಿಲ್ಲ. ಕೊಟ್ಟ ಹೆಣ್ಣು ಕುಲಕ್ಕೆ ಹೊರಗಾಗುವ ಪಿತೃರೂಪಿ ಸಾಂಸ್ಕೃತಿಕ ಸಂದರ್ಭದಲ್ಲಿ ತವರಿಗೆ ಹೋದ ಹೆಣ್ಣು ಗಂಡನ ಮನೆಗೆ ಹಿಂದಿರುಗಿ ಬರಲೇಬೇಕಷ್ಟೆ! ಹಾಗಾಗಿಯೇ ಅತ್ತೆ, ಮಾವರಲ್ಲಿ ಒಂದು ಬಗೆಯ ನಿರಾತಂಕ, ನಿರಾಳತೆ ಸಹಜವಾದುದು.

ಪಿತೃರೂಪಿ ಪಠ್ಯದಲ್ಲಿ ಹಾರದ ಸಂಕಟಕ್ಕೆ ಸಿಲುಕಿದ ಹೆಣ್ಣಿಗೆ ತನ್ನ ಸಂಕಷ್ಟ, ಸಂಘರ್ಷವನ್ನು, ತಲ್ಲಣ, ತಳಮಳವನ್ನು ಹೇಳುವ ಬಾಯಿಯೂ ಇಲ್ಲ, ಕೇಳುವ ಕಿವಿಯೂ ಇಲ್ಲದ ಶೂನ್ಯವೇ ಹೆಣ್ಣಿನ ದುರಂತವನ್ನು ಅನುಭವಕ್ಕೆ ತರುತ್ತದೆ. ಅಲ್ಲಿ ಆಕೆಗೆ ಎದುರಾದ ಸವಾಲನ್ನು ದಾಟುವ ಯಾವ ಕಿರುದಾರಿಯೂ ತೆರೆಯುವುದಿಲ್ಲ. ಆಕೆ ಬದುಕುಳಿಯುವ ಬಾಗಿಲಿಗಾಗಿ ತಡಕಾಡುತ್ತಾಳೆ. ಕಣ್ಣೀರು ಹಾಕುತ್ತಾ ತವರು, ಗೆಳತಿ ಎಂದು ಅಲೆದಾಡುತ್ತಾಳೆ. ತವರಿನಲ್ಲಿ ಸತ್ಯವನ್ನು ಬಾಯಿ ಬಿಡಲಾರದ ಸ್ಥಿತಿ ಆ ಹೆಣ್ಣುಮಗಳದಾದರೆ ಗೆಳತಿಯ ಸ್ನೇಹ ಸಲುಗೆಯಲ್ಲಿ ಕಟು ಸತ್ಯವನ್ನು ಬಾಯಿಬಿಡುತ್ತಾಳೆ: "ನಮ್ಮತ್ತೆ ನಮ್ಮಾವ ಕೆರೆಗ್ಹಾರ ಕೊಡುತಾರಂತ". "ಕೊಟ್ಟಾರೆ ಕೊಡಲೇಳು ಇಟ್ಟಾಂಗ ಇರಬೇಕ" ಎನ್ನುವ ನಾರೀಧರ್ಮದ ಸ್ಥಾಪಿತ ಮೌಲ್ಯಾದರ್ಶದಲ್ಲಿ ಹೆಣ್ಣು ಮೌನಗೌರಿಯಾಗಿ ಕೊರಳೊಡ್ಡಿ ಬಲಿಯಾಗುವುದಷ್ಟೇ ಸಾಧ್ಯ.

ಇಲ್ಲಿನ 'ಹಾರ'ದ ಸೂಕ್ಷ್ಮವನ್ನು ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಹೆಣ್ಣೊಬ್ಬಳ ಇಕ್ಕಟ್ಟು, ಬಿಕ್ಕಟ್ಟುಗಳೊಂದಿಗೆ ಅರ್ಥೈಸಬೇಕು. ಮದುವೆಯೊಂದಿಗೆ ತವರಿನಿಂದ ಹೊರಗಾಗುವ ಹೆಣ್ಣು ಗಂಡನ ಕುಟುಂಬದ ಪೂರ್ಣ ಅಧಿಕಾರಕ್ಕೆ ಒಳಗಾಗುತ್ತಾಳೆ. ಹೆಣ್ಣಿನ ಮೇಲಿನ ಗಂಡಾಳಿಕೆಯ ಅಧಿಕಾರ ಯಾವ ಮಟ್ಟದ್ದು ಎಂದರೆ ಸೊಸೆ ಹೆಣ್ಣನ್ನು ಬಲಿ-ಹಾರ ಕೊಡುವಷ್ಟು. ಹೀಗಾಗಿ ಇಲ್ಲಿ ಸೊಸೆಹೆಣ್ಣನ್ನು ಹಾರ ಕೊಡುವ ನಿರ್ಧಾರವಾಗುತ್ತದೆಯೇ ಹೊರತು ಹೆಣ್ಣಿನ ಹಾರವಾಗುವ ಇಚ್ಛೆಯಲ್ಲ. ಇದು ತ್ಯಾಗ ಅಥವಾ ಬಲಿದಾನ ಹೇಗಾಗುತ್ತದೆ? ಹೆಣ್ಣಿನ ಬಾಯಿಯ ಮೇಲೂ ಹತೋಟಿ ಇರುವಲ್ಲಿ ಅವಳಿಗೆ ಮೌನವ್ರತವಲ್ಲದೆ ಇನ್ನಾವ ಆಯ್ಕೆ ಇದೆ? ಹೆಣ್ಣಿನ ಈ ಮೌನವನ್ನು ಸಮ್ಮತಿ ಎಂದು ತೀರ್ಮಾನ ನೀಡುವುದು ಎಷ್ಟು ಸರಿ? ಅದು ಗಂಡಿನ ಒತ್ತಡ, ಬಲಾತ್ಕಾರ ಹಾಗೂ ಹೆಣ್ಣಿನ ಅಸಹಾಯಕತೆ ಮತ್ತು ಅನಿವಾರ್ಯತೆಯಲ್ಲಿ ಸಾಧ್ಯವಾದದ್ದು.

ಕರಾವಳಿಯಲ್ಲಿ 'ಕೆರೆಗೆ ಹಾರ' ಗದ್ಯ,